ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಪೌರಸೇವಾ ವೃಂದದ ಹಿರಿಯ ಆರೋಗ್ಯ ನಿರೀಕ್ಷಕರು ಗಳಿಗೆ ಕರ್ನಾಟಕ ಪೌರಾಡಳಿತ ಸೇವೆಯ ಮುಖ್ಯಾಧಿಕಾರಿ ಶ್ರೇಣಿ-II ವೃಂದಕ್ಕೆ ಆಯ್ಕೆ ಮೂಲಕ ನೇಮಕ ಮಾಡುವ ಬಗ್ಗೆ- ಆದೇಶ.

**ಓದಲಾಗಿದೆ:-** 1) ಕರ್ನಾಟಕ ಪೌರಾಡಳಿತ ಸೇವಾ (ವೃಂದ ಮತ್ತು ನೇಮಕಾತಿ) ನಿಯಮಗಳು, 2022, ಸರ್ಕಾರದ ಅಧಿಸೂಚನೆ ಸಂಖ್ಯೆ. ನಅಇ 82 ಇಎಂಸಿ 2016, ದಿನಾಂಕ07.07.2022.

2) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: 825200, ಡಿಎಂಎಇಎಸ್ಟಿ2 ಕೆಎಂಎಎಸ್ 56 2022, ದಿನಾಂಕ 07.03.2023 ಮತ್ತು 28.09.2024.

3) ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಇವರ ಆದೇಶ ಸಂಖ್ಯೆ: 1154299 DMA EST2 SHI 25/2023, ದಿನಾಂಕ 28.03.2024-(ಹಿರಿಯ ಆರೋಗ್ಯ ನಿರೀಕ್ಷಕರ ಮೂಲ ವೃಂದದ ಜೇಷ್ಠತಾ ಪಟ್ಟಿ).

**ಪ್ರಸ್ತಾವನೆ:-**

1. ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ 07.07.2022ರ ಅಧಿಸೂಚನೆಯಲ್ಲಿ ಕರ್ನಾಟಕ ಪೌರಾಡಳಿತ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಗಳು, 2022ನ್ನು ರಚಿಸಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರ ಪಡಿಸಲಾಗಿರುತ್ತದೆ. ಸದರಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮುಖ್ಯಾಧಿಕಾರಿ ಶ್ರೇಣಿ-II ವೃಂದಕ್ಕೆ ಒಟ್ಟು160 ಹುದ್ದೆಗಳನ್ನು ನಿಗದಿಪಡಿಸಲಾಗಿರುತ್ತದೆ. ಕರ್ನಾಟಕ ಪೌರಾಡಳಿತ ಸೇವೆಯ ಮುಖ್ಯಾಧಿಕಾರಿ ಶ್ರೇಣಿ-II ವೃಂದಕ್ಕೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಆರೋಗ್ಯ ನಿರೀಕ್ಷಕರುಗಳನ್ನು ಜೇಷ್ಠತೆಗನುಸಾರವಾಗಿ ಮೂಲ ವೃಂದದ ಹಾಗೂ ಕಲ್ಯಾಣ ಕರ್ನಾಟಕ (371ಜೆ) ವೃಂದದ ನೌಕರರುಗಳನ್ನು ಆಯ್ಕೆ ಮೂಲಕ ನೇಮಕ ಮಾಡುವ ಸಂಬಂಧ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ಉಲ್ಲೇಖ (2)ರ ದಿನಾಂಕ 28.09.2024 ರ ಪತ್ರದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಕರ್ನಾಟಕ ಪೌರಾಡಳಿತ ಸೇವಾ (ವೃಂದ ಮತ್ತು ನೇಮಕಾತಿ) ನಿಯಮಗಳು, 2022 ವೃಂದ ಮತ್ತು ನೇಮಕಾತಿ ನಿಯಮಗಳ ಅನುಸೂಚಿ-3 ರಲ್ಲಿ ಮುಖ್ಯಾಧಿಕಾರಿ ಶ್ರೇಣಿ-2ರ ವೃಂದಕ್ಕೆ 160 ಹುದ್ದೆಗಳನ್ನು ಗುರುತಿಸಲಾಗಿದೆ. ಕೊಡಗು ಜಿಲ್ಲೆಯ ವಿರಾಜಪೇಟೆ ಹಾಗೂ ವಿಜಯನಗರ ಜಿಲ್ಲೆಯ ಕಮಲಾಪುರ ಪಟ್ಟಣ ಪಂಚಾಯಿತಿಗಳು ಪುರಸಭೆಯಾಗಿ ಮೇಲ್ದರ್ಜೆಗೇರಿರುವುದರಿಂದ ಸದರಿ 02 ಹುದ್ದೆಗಳನ್ನು ಮಂಜೂರಾದ ಹುದ್ದೆಗಳ ಎದುರಾಗಿ ಕಡಿತಗೊಳಿಸಬಹುದಾಗಿರುತ್ತದೆ ಮತ್ತು ಕೊಡಗು ಜಿಲ್ಲೆಯ ಪೊನ್ನಂಪೇಟೆಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿರುವುದರಿಂದ ಇದನ್ನು ಸೇರಿಸಿಕೊಂಡು ಅದರಂತೆ ಪ್ರಸ್ತುತವಿರುವ ಪಟ್ಟಣ ಪಂಚಾಯಿತಿಗಳನ್ನು ಪರಿಗಣಿಸಿ, ಒಟ್ಟು 159 ಹುದ್ದೆಗಳನ್ನು ಮುಖ್ಯಾಧಿಕಾರಿ ಶ್ರೇಣಿ-2 ರ ಹುದ್ದೆಗಳೆಂದು ಪರಿಗಣಿಸಬಹುದಾಗಿರುತ್ತದೆ.

3. ಸದರಿ ಹುದ್ದೆಗಳನ್ನು ಈ ಕೆಳಕಂಡಂತೆ ನೇಮಕ / ಆಯ್ಕೆ ಮೂಲಕ ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

| ಕ್ರ. ಸಂ | ವೃಂದವಾರು | ಶೇಕಡವಾರು |
|---|---|---|
| 1 | ನೇರನೇಮಕಾತಿ | ಶೇ.50ರಷ್ಟು |
| 2 | ಸೇವಾ ನಿರತ ಸಿಬ್ಬಂದಿಗಳಿಗೆ ನೇರ ನೇಮಕಾತಿ (In-service Direct Recruitment) | ಶೇ.10ರಷ್ಟು |
| 3 | ಹಿರಿಯ ಆರೋಗ್ಯ ನಿರೀಕ್ಷಕರುಗಳ ವೃಂದದಿಂದ ಆಯ್ಕೆ ಮೂಲಕ ನೇಮಕ | ಶೇ.40ರಷ್ಟು |



[signature] 30.10.24

4. ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ದಿನಾಂಕ 30.12.2022ರ ಆದೇಶದಲ್ಲಿ ದಿನಾಂಕ 31.12.2023ಕ್ಕೆ ಇರುವಂತೆ ನಗರ ಸ್ಥಳೀಯ ಸಂಸ್ಥೆಗಳ ಮೂಲ ವೃಂದದ ಹಿರಿಯ ಆರೋಗ್ಯ ನಿರೀಕ್ಷಕರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಪ್ರಚುರ ಪಡಿಸಲಾಗಿರುತ್ತದೆ. ಸದರಿ ಜೇಷ್ಠತಾ ಪಟ್ಟಿಯನುಸಾರ ನೌಕರರುಗಳು ಬಡ್ತಿ ಹೊಂದಿರುವ ಬಗ್ಗೆ, ಕನಿಷ್ಠ ಅರ್ಹತಾದಾಯಕ ಸೇವೆ ಸಲ್ಲಿಸಿರುವ ಹಾಗೂ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿರುವ ಬಗ್ಗೆ, ಹಾಗೂ ಇಲಾಖಾ ವಿಚಾರಣೆ / ದಂಡನಾವಧಿಯಲ್ಲಿರುವ ನೌಕರರ ಮಾಹಿತಿಯೊಂದಿಗೆ ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ 07.03.2023 ಮತ್ತು 29.08.2024ರ ಪ್ರಸ್ತಾವನೆಗಳಲ್ಲಿ ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಇಲಾಖಾ ವಿಚಾರಣೆ / ಕ್ರಿಮಿನಲ್ ಪ್ರಕರಣ / ದಂಡನಾವಧಿಯಲ್ಲಿರುವ ಪ್ರಕರಣಗಳ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ನಗರ ಸ್ಥಳೀಯ ಸಂಸ್ಥೆಗಳ ಹಿರಿಯ ಆರೋಗ್ಯ ನಿರೀಕ್ಷಕರು ವೃಂದದಿಂದ ಕರ್ನಾಟಕ ಪೌರಾಡಳಿತ ಸೇವೆಯ ಮುಖ್ಯಾಧಿಕಾರಿ ಶ್ರೇಣಿ-II ಹುದ್ದೆಗೆ ಆಯ್ಕೆ ಮೂಲಕ ನೇಮಕಾತಿ ಮಾಡಲು ಪೌರಾಡಳಿತ ನಿರ್ದೇಶನಾಲಯದಿಂದ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಲು ದಿನಾಂಕ 19.09.2024 ರಂದು ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯನ್ನು ನಡೆಸಲಾಗಿರುತ್ತದೆ.

5. ದಿನಾಂಕ 19.09.2024 ರಂದು ನಡೆದ ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯ ನಡವಳಿಯಲ್ಲಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ದಿನಾಂಕ 07.03.2023 ಮತ್ತು ದಿನಾಂಕ 29.08.2024 ರ ಪ್ರಸ್ತಾವನೆಗಳನ್ವಯ 25 ಹಿರಿಯ ಆರೋಗ್ಯ ನಿರೀಕ್ಷಕರುಗಳನ್ನು (ವೇತನ ಶ್ರೇಣಿ ರೂ.30350-58250) (2024ರ ಪರಿಷ್ಕೃತ ವೇತನ ಶ್ರೇಣಿ ರೂ.49050-92500) ಮುಖ್ಯಾಧಿಕಾರಿ ಶ್ರೇಣಿ-2 ವೃಂದಕ್ಕೆ (ವೇತನ ಶ್ರೇಣಿ ರೂ. 33450-62600) (2024ರ ಪರಿಷ್ಕೃತ ವೇತನ ಶ್ರೇಣಿ ರೂ.54175-99400) ಆಯ್ಕೆ ಮೂಲಕ ನೇಮಕ ಮಾಡಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ,-

<u>ಸರ್ಕಾರದ ಆದೇಶ ಸಂಖ್ಯೆ: ನಅಇ 174 ಇಎಂಸಿ 2024 (ಇ),</u>

**<u>ಬೆಂಗಳೂರು, ದಿನಾಂಕ 25.10.2024.</u>**

6. ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪೌರಸೇವೆಯ ಹಿರಿಯ ಆರೋಗ್ಯ ನಿರೀಕ್ಷಕರ ಮೂಲ ವೃಂದದ ಈ ಕೆಳಕಂಡ 25 (ಇಪ್ಪತ್ತೈದು) ನೌಕರರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಪೌರಾಡಳಿತ ಸೇವೆಯ ಮುಖ್ಯಾಧಿಕಾರಿ ಶ್ರೇಣಿ-II ವೃಂದದ ಅಧಿಕಾರಿಗಳೆಂದು ಪರಿಗಣಿಸಿ, ವೇತನ ಶ್ರೇಣಿ ರೂ.33450-62600/- 2024ರ ಪರಿಷ್ಕೃತ ವೇತನ ಶ್ರೇಣಿ ರೂ.54175-99400 ರಲ್ಲಿ ಅವರುಗಳು ಪ್ರಸ್ತುತ ಹೊಂದಿರುವ ಹುದ್ದೆಯಲ್ಲಿ ಪಡೆಯುತ್ತಿರುವ ವೇತನ ಸೇವಾ ಸೌಲಭ್ಯಗಳೊಂದಿಗೆ ಮುಖ್ಯಾಧಿಕಾರಿ ಶ್ರೇಣಿ-II ವೃಂದಕ್ಕೆ ಆಯ್ಕೆ ಮೂಲಕ ನೇಮಕ ಮಾಡಿ ಆದೇಶಿಸಿದೆ ಹಾಗೂ ಕರ್ನಾಟಕ ಪೌರಾಡಳಿತ ಸೇವೆಯ ವೃಂದದ ಅಧಿಕಾರಿಗಳಿಗೆ ಅನ್ವಯವಾಗುವ ಸೇವಾ ನಿಯಮಾವಳಿ ಮತ್ತು ಈ ಆದೇಶದಲ್ಲಿ ವಿಧಿಸಿರುವ ಷರತ್ತಿಗೆ ಒಳಪಟ್ಟು ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ | ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ಸ್ಥಳ<br>ಶ್ರೀ/ಶ್ರೀಮತಿ | ಆಯ್ಕೆ ಮೂಲಕ ನೇಮಕ ಮಾಡಿ ಸ್ಥಳನಿಯುಕ್ತಿಗೊಳಿಸಿರುವ ಹುದ್ದೆ ಮತ್ತು ಸ್ಥಳ |
|---|---|---|
| 1. | ನಟರಾಜ್ ಹೆಚ್. ಎನ್.<br>ಹಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ, ಕೋಲಾರ | ಮುಖ್ಯಾಧಿಕಾರಿ, ಪುರಸಭೆ, ಕೆ.ಆರ್. ಪೇಟೆ- ಖಾಲಿ ಹುದ್ದೆಗೆ ಸ್ವಂತ ವೇತನ ಶ್ರೇಣಿಯ ಮೇಲೆ |
| 2. | ನವೀನ್ ಕುಮಾರ್ ಟಿ. ಕೆ<br>ಹಿರಿಯ ಆರೋಗ್ಯ ನಿರೀಕ್ಷಕರು ಪ್ರಸ್ತುತ ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ದೊಡ್ಡತೋಗೂರು | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ದೊಡ್ಡತೋಗೂರು, ಬೆಂಗಳೂರು ನಗರ ಜಿಲ್ಲೆ |

T. Nup 25.10.24

| | | |
|---|---|---|
| 3. | ಉಮೇಶ್ ಗುಡ್ಡದ್<br>ಹಿರಿಯ ಆರೋಗ್ಯ ನಿರೀಕ್ಷಕರು, ಸ್ವಂತ ವೇತನ ಶ್ರೇಣಿಯ ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಹೊಸನಗರ, ಶಿವಮೊಗ್ಗ ಜಿಲ್ಲೆ | ಕಮಿಟಿ ಸೆಕ್ರಟರಿ, ವಿಜಯಪುರ ಮಹಾನಗರಪಾಲಿಕೆ |
| 4. | ಸಂತೋಷ್ ಚಂದ್ರಿಕೇರ್<br>ಹಿರಿಯ ಆರೋಗ್ಯ ನಿರೀಕ್ಷಕರು, ಸ್ವಂತ ವೇತನ ಶ್ರೇಣಿಯ ಮೇಲೆ ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ರಟ್ಟಿಹಳ್ಳಿ | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ರಟ್ಟಿಹಳ್ಳಿ |
| 5. | ಚಿದಾನಂದ ಮುಗಳಕೋಡ<br>ಹಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಮುಗಳಖೋಡ | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಕಲ್ಲೋಳಿ |
| 6. | ಕೆ. ಸತೀಶ<br>ಹಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ, ಹುಣಸೂರು | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಸೋಮವಾರಪೇಟೆ-ಶ್ರೀ ನಾಚಪ್ಪರವರ ಜಾಗಕ್ಕೆ |
| 7. | ಗೋಪಿ ಎಸ್.<br>ಹಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಗುಂಡ್ಲುಪೇಟೆ | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಪೊನ್ನಂಪೇಟೆ |
| 8. | ಹರೀಶ್ ಎಂ. ಎನ್.<br>ಹಿರಿಯ ಆರೋಗ್ಯ ನಿರೀಕ್ಷಕರು ಸ್ವಂತ ವೇತನ ಶ್ರೇಣಿಯ ಮೇಲೆ ಕಂದಾಯಾಧಿಕಾರಿ, ನಗರಸಭೆ, ಮುಳಬಾಗಿಲು | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಅಜ್ಜಂಪುರ-ಖಾಲಿ ಹುದ್ದೆಗೆ |
| 9. | ಕರುಣಾಕರ ವಿ.<br>ಹಿರಿಯ ಆರೋಗ್ಯ ನಿರೀಕ್ಷಕರು, ಸ್ವಂತ ವೇತನ ಶ್ರೇಣಿಯ ಮೇಲೆ ಸಮುದಾಯ ಸಂಘಟನಾಧಿಕಾರಿ, ನಗರಸಭೆ, ಪುತ್ತೂರು | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ವಿಟ್ಲ-ಶ್ರೀ ಗೋಪಾಲನಾಯ್ಕ ರವರ ಜಾಗಕ್ಕೆ |
| 10. | ಸರವಣ ಎಸ್.<br>ಹಿರಿಯ ಆರೋಗ್ಯ ನಿರೀಕ್ಷಕರು ಸ್ವಂತ ವೇತನ ಶ್ರೇಣಿಯ ಮೇಲೆ ಕಂದಾಯಾಧಿಕಾರಿ, ನಗರಸಭೆ, ಚಾಮರಾಜನಗರ | ಒಂದು ದಿನದ ಮಟ್ಟಿಗೆ ಗುಂಡ್ಲುಪೇಟೆ ಪುರಸಭೆಯ ಮುಖ್ಯಾಧಿಕಾರಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿದೆ<br>ತದನಂತರ ಸರ್ಕಾರದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ. |
| 11. | ಸಂತೋಷ ಕುಮಾರ್ ಎಸ್. ಕೆ<br>ಹಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಹೆಚ್. ಡಿ. ಕೋಟೆ | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಸರಗೂರು-ಶ್ರೀ ಎಸ್. ಎಸ್. ಮಂಜುನಾಥ ರವರ ಜಾಗಕ್ಕೆ |
| 12. | ಶಿವಶಂಕರ್ ಯು. ಎನ್.<br>ಹಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಮದ್ದೂರು | ಮುಖ್ಯಾಧಿಕಾರಿ, ಪುರಸಭೆ, ಶ್ರೀರಂಗಪಟ್ಟಣ-ಸ್ವಂತ ವೇತನ ಶ್ರೇಣಿಯ ಮೇಲೆ |
| 13. | ರಮೇಶ್ ಜಿ. ಎಸ್<br>ಹಿರಿಯ ಆರೋಗ್ಯ ನಿರೀಕ್ಷಕರು ಸ್ವಂತ ವೇತನ ಶ್ರೇಣಿಯ ಮೇಲೆ ಕಂದಾಯಾಧಿಕಾರಿ, ಪುರಸಭೆ, ಕೆ.ಆರ್. ನಗರ | ಒಂದು ದಿನದ ಮಟ್ಟಿಗೆ ಪುರಸಭೆ, ಸಕಲೇಶಪುರ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿದೆ.<br><br>ತದನಂತರ ಕಂದಾಯಾಧಿಕಾರಿ, ಪುರಸಭೆ, ಕೆ.ಆರ್. ನಗರ ಹುದ್ದೆಗೆ ಸ್ವಂತ ವೇತನ ಶ್ರೇಣಿಯ ಮೇಲೆ |
| 14. | ಯತೀಶ್ ಕುಮಾರ್ ಆರ್.<br>ಹಿರಿಯ ಆರೋಗ್ಯ ನಿರೀಕ್ಷಕರು ಸ್ವಂತ ವೇತನ ಶ್ರೇಣಿಯ ಮೇಲೆ ವ್ಯವಸ್ಥಾಪಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾಸನ | ಒಂದು ದಿನದ ಮಟ್ಟಿಗೆ ಚನ್ನರಾಯಪಟ್ಟಣ ಪುರಸಭೆಯ ಮುಖ್ಯಾಧಿಕಾರಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿದೆ.<br>ತದನಂತರ ಸರ್ಕಾರದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ. |

25.10.2

| | | |
|---|---|---|
| 15. | ಸತೀಶ್ ಆರ್. ಬಿ<br>ಹಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ, ಭದ್ರಾವತಿ | ಕಮಿಟಿ ಸೆಕ್ರಟರಿ, ಮಹಾನಗರಪಾಲಿಕೆ, ಶಿವಮೊಗ್ಗ |
| 16. | ಜಯಶಂಕರ್ ಪ್ರಸಾದ್<br>ಹಿರಿಯ ಆರೋಗ್ಯ ನಿರೀಕ್ಷಕರು, ಮಂಗಳೂರು ಮಹಾನಗರಪಾಲಿಕೆ. | ಮುಖ್ಯಾಧಿಕಾರಿ, ಪುರಸಭೆ, ಮೂಡಲಗಿ |
| 17. | ವರಲಕ್ಷ್ಮಿ ಟಿ. ಎನ್.<br>ಹಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ, ಪುತ್ತೂರು | ಕಮಿಟಿ ಸೆಕ್ರಟರಿ, ತುಮಕೂರು ಮಹಾನಗರಪಾಲಿಕೆ |
| 18. | ಕೃಷ್ಣ ಪ್ರಸಾದ್<br>ಹಿರಿಯ ಆರೋಗ್ಯ ನಿರೀಕ್ಷಕರು ಸ್ವಂತ ವೇತನ ಶ್ರೇಣಿಯ ಮೇಲೆ ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ | ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ |
| 19. | ಮಹೇಶ್ವರಪ್ಪ ಟಿ. ಸಿ.<br>ಹಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ತರೀಕೆರೆ | ಮುಖ್ಯಾಧಿಕಾರಿ, ಪುರಸಭೆ, ಹೊಳಲ್ಕೆರೆ |
| 20. | ಪವಿತ್ರ ಜಿ.ಕೆ<br>ಹಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ, ರಾಮನಗರ | ಕಮಿಟಿ ಸೆಕ್ರಟರಿ, ಮೈಸೂರು ಮಹಾನಗರಪಾಲಿಕೆ |
| 21. | ಗಿರೀಶ್ ಟಿ. ಎಸ್.<br>ಹಿರಿಯ ಆರೋಗ್ಯ ನಿರೀಕ್ಷಕರು ಸ್ವಂತ ವೇತನ ಶ್ರೇಣಿಯ ಮೇಲೆ ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು, ಪಟ್ಟಣ ಪಂಚಾಯಿತಿ, ತುರುವೇಕೆರೆ | ಮುಖ್ಯಾಧಿಕಾರಿ, ಪುರಸಭೆ, ಬೀರೂರು |
| 22. | ಸರಳ ಸಿ.<br>ಹಿರಿಯ ಆರೋಗ್ಯ ನಿರೀಕ್ಷಕರು (ಸ್ಥಳ ನಿರೀಕ್ಷಣೆ) | ಕಮಿಟಿ ಸೆಕ್ರಟರಿ, ದಾವಣಗೆರೆ ಮಹಾನಗರಪಾಲಿಕೆ-ಶ್ರೀಮತಿ ಮೇಘ ಸಿ. ಹೆಚ್ ರವರ ಜಾಗಕ್ಕೆ |
| 23. | ಶಿವಣ್ಣ ಎನ್. ವಿ<br>ಹಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ, ಗೌರಿಬಿದನೂರು | ಒಂದು ದಿನದ ಮಟ್ಟಿಗೆ ಹರಪನಹಳ್ಳಿ ಮುಖ್ಯಾಧಿಕಾರಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿದೆ. ತದನಂತರ ವ್ಯವಸ್ಥಾಪಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಹುದ್ದೆಗೆ ಸ್ವಂತ ವೇತನ ಶ್ರೇಣಿಯ ಮೇಲೆ. |
| 24. | ಎಂ.ಸಿ. ಸರಸ್ವತಿ ಷಣ್ಮುಗ ಸುಂದರಿ<br>ಹಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ, ರಾಬರ್ಟಸನ್ ಪೇಟೆ, ಕೆ.ಜಿ.ಎಫ್ | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಶೃಂಗೇರಿ |
| 25. | ಬಾಲಚಂದ್ರ ಬಿ.<br>ಹಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ, ನಗರಸಭೆ, ಹೊಸಪೇಟೆ | ಕಮಿಟಿ ಸೆಕ್ರಟರಿ, ಮಂಗಳೂರು ಮಹಾನಗರಪಾಲಿಕೆ |

ಈ ಆದೇಶದಲ್ಲಿ ಸ್ಥಳ ತೋರಿಸದ ಅಧಿಕಾರಿ/ನೌಕರರುಗಳು ಸಕ್ಷಮ ಪ್ರಾಧಿಕಾರದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಷರತ್ತುಗಳು:

1) ಈ ಆದೇಶದಲ್ಲಿ ಕೆ ಎಂ ಎ ಎಸ್ ಮುಖ್ಯಾಧಿಕಾರಿ ಶ್ರೇಣಿ-II ವೃಂದಕ್ಕೆ ಆಯ್ಕೆ ಮೂಲಕ ನೇಮಕಾತಿ ಮಾಡಿ ಸ್ಥಳನಿಯುಕ್ತಿಗೊಳಿಸಿರುವ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡು ವರದಿಯನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವುದು;

2) ಹಿರಿಯ ಆರೋಗ್ಯ ನಿರೀಕ್ಷಕರನ್ನು ಮುಖ್ಯಾಧಿಕಾರಿ ಶ್ರೇಣಿ-II ವೃಂದಕ್ಕೆ ಈ ಆದೇಶದ ಮೂಲಕ ಆಯ್ಕೆ ಗೊಂಡಿದ್ದು, ಅವರ ವಿರುದ್ಧ ಈ ಪೂರ್ವದಲ್ಲಿ/ಹೊಸದಾಗಿ ಯಾವುದಾದರೂ ಇಲಾಖಾ

ವಿಚಾರಣೆ ಹೂಡಿರುವುದು ಕಂಡುಬಂದಲ್ಲಿ ಸದರಿಯವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು ಅಥವಾ ಹಿಂಪಡೆಯಲಾಗುವುದು;

3) ಮೇಲ್ಕಂಡ ಆದೇಶವು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರಿಟ್ ಅರ್ಜಿ ಸಂಖ್ಯೆ: 220/2021 ಮತ್ತು ಇತರೆ ಹಾಗೂ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾಗಿರುವ ಇತರೆ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಈ ಆದೇಶವನ್ನು ನಿಯಮಾನುಸಾರ ಪರಿಶೀಲಿಸಿ ಪರಿಷ್ಕರಿಸುವ ಷರತ್ತಿಗೊಳಪಟ್ಟಿರುತ್ತದೆ; ಮತ್ತು

4) ಪೌರ ಸೇವೆಯ ಹಿರಿಯ ಆರೋಗ್ಯ ನಿರೀಕ್ಷಕರುಗಳನ್ನು ಕರ್ನಾಟಕ ಪೌರಾಡಳಿತ ಸೇವೆಯಮುಖ್ಯಾಧಿಕಾರಿ ಶ್ರೇಣಿ-II ವೃಂದಕ್ಕೆ ಆಯ್ಕೆ ಮೂಲಕ ನೇಮಕ ಗೊಳಿಸಿರುವ ಕಾರಣ ಮುಖ್ಯಾಧಿಕಾರಿ ಶ್ರೇಣಿ-II ವೃಂದದ ಜ್ಯೇಷ್ಠತೆಯ ಕುರಿತು ಜೇಷ್ಠತಾ ಪಟ್ಟಿ ತಯಾರಿಸಿ ಅಂತಿಮ ಗೊಳಿಸಲು ಪೌರಾಡಳಿತ ನಿರ್ದೇಶನಾಲಯವು ನಿಯಮಾನುಸಾರ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತುಅವರಹೆಸರಿನಲ್ಲಿ,

T. Manju 25.10.24

(ಟಿ. ಮಂಜುನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
25/10/24

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಇಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲು ಕೋರಲಾಗಿದೆ.

ಪ್ರತಿಗಳು:
1) ಮಹಾಲೇಖಪಾಲರು, (ಎ & ಇ) ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
3) ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ನಿರ್ದೇಶನಾಲಯ, ವಿ. ವಿ. ಗೋಪುರ, ಬೆಂಗಳೂರು.
4) ನಿರ್ದೇಶಕರು, ಸರ್ಕಾರಿ ವಿಮಾ ಇಲಾಖೆ, ವಿ. ವಿ. ಗೋಪುರ, ಬೆಂಗಳೂರು.
5) ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
6) ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರು
7) ಜಂಟಿ ನಿರ್ದೇಶಕರು, ರಾಜ್ಯ ಹೂಜೂರ್ ಖಜಾನೆ, ಬೆಂಗಳೂರು.
8) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ
9) ಸಂಬಂಧಪಟ್ಟ ಮಹಾನಗರಪಾಲಿಕೆಯ ಆಯುಕ್ತರುಗಳಿಗೆ
10) ಸಂಬಂಧಪಟ್ಟ ಜಿಲ್ಲೆಯ ಯೋಜನಾ ನಿರ್ದೇಶಕರುಗಳಿಗೆ
11) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿಗಳು.
12) ಸಂಬಂಧಪಟ್ಟ ನಗರಸಭೆಯ ಪೌರಾಯುಕ್ತರುಗಳಿಗೆ
13) ಸಂಬಂಧಪಟ್ಟ ಪುರಸಭೆ / ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳಿಗೆ
14) ಸಂಬಂಧಪಟ್ಟ ಅಧಿಕಾರಿ/ನೌಕರರುಗಳಿಗೆ.
15) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.